ದಿನಾಂಕ 21-12-2013 ರಂದು ಕೊಠಡಿ ಸಂ. 252. ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹದಿನೇಳನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಹೆಚ್.ಆರ್. ನಾಗೇಂದ್ರ | ಸದಸ್ಯರು |
| 4. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 5. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 6. | ಶ್ರೀಮತಿ ನಫೀಸ್ ಫಾತಿಮಾ | ಸದಸ್ಯರು |
| 7. | ಡಾ. ಕೆ.ಎಸ್. ವರಪ್ರಸಾದ್ | ಸದಸ್ಯರು |
| 8. | ಶ್ರೀ ಸುಭೋದ್ ಯಾದವ್ | ಸದಸ್ಯರು |
| 9. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 10. | ಡಾ. ಡಿ.ಪಿ. ಬಿರಾದಾರ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನೇಳನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಅನುಕ್ರಮ ಸಂ: 1 | ದಿನಾಂಕ 28-9-2013 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನಾರನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು |

ಠರಾವು:

ದೀರ್ಘ ಚರ್ಚೆಯ ನಂತರ ದಿನಾಂಕ 28-9-2013 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನಾರನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು. ಮುಂದುವರೆದು, ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಿಂದ ಸ್ಥಿರೀಕರಿಸಿದ ವಿಷಯ ಮತ್ತು ಕೈಗೊಂಡ ಕ್ರಮಗಳನ್ನು ಪ್ರತ್ಯೇಕವಾಗಿ ಒದಗಿಸಲು ಸಲಹೆ ನೀಡಿದರು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 2 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ನಾಲ್ಕನೇಯ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು. |

ಠರಾವು:

ವಿಸ್ತೃತ ಚರ್ಚೆಯ ನಂತರ, ನಾಲ್ಕನೇಯ ಘಟಿಕೋತ್ಸವಕ್ಕೆ ಭಾಷಣ ಮಾಡಲು ವಿಶಿಷ್ಠ ಸಾಧನೆಗೈದ ಗಣ್ಯ ವ್ಯಕ್ತಿಗಳಲ್ಲೊಬ್ಬರಿಗೆ ಅತಿಥಿಯನ್ನಾಗಿ ನಿಗದಿಪಡಿಸಲು ಹಾಗೂ ಅನುಮೋದನೆಗಾಗಿ ಪ್ರಸ್ತಾಪಿಸಿದವರಲ್ಲಿ ಒಬ್ಬರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದಿಸಿತು,

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 3 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು. |
|---|---|

ಠರಾವು:

ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ದುಬಾರಿ ಬೆಲೆಗೆ ಖರೀದಿಸಿದ ಉಪಕರಣಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಸಲಹೆ ನೀಡಿದರು. ಆದಾಗ್ಯೂ ಪ್ರತಿಯೊಂದು ಉಪಕರಣಗಳಿಗಾಗಿ ಪ್ರತ್ಯೇಕವಾಗಿ ಲಾಗ್-ಪುಸ್ತಕಗಳನ್ನು ಇಟ್ಟು ನಿರ್ವಹಿಸಲಾಗುತ್ತಿದೆಯೆಂದು ಅಧ್ಯಕ್ಷರು ತಿಳಿಸಿದರು. ಉಪಯೋಗಿಸುತ್ತಿರುವ ಉಪಕರಣಗಳ ಪರಿಶೀಲನೆಗಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀಮತಿ ನಫೀಸ ಫಾತಿಮಾ ಅವರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಬಹುದು ಎಂದು ಸಲಹೆ ನೀಡಲಾಯಿತು.

(ಕ್ರಮ : ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು)

| ಅನುಕ್ರಮ ಸಂ: 4 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು. |
|---|---|

ಠರಾವು:

ದೀರ್ಘ ಚರ್ಚೆಯ ನಂತರ, ಅನುದಾನದ ಲಭ್ಯತೆಯನ್ನು ಗಮನಿಸಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಆದಾಗ್ಯೂ, ಸೌರ ಶಕ್ತಿ ಉದ್ಯಾನವನ್ನು ಸ್ಥಾಪಿಸುವ ವಿಷಯಕ್ಕೆ ಸಂಬಂದಿಸಿದಂತೆ, ಸೌಲಭ್ಯಗಳೇನಾದರೂ ಇದ್ದಲ್ಲಿ ಅವುಗಳನ್ನು ಪಡೆಯಲು ಮೇಸರ್ಸ್ ಕ್ರೀಡಲ್ ಸಂಸ್ಥೆಗೆ ಸಂಪರ್ಕಿಸಲು ಸಲಹೆ ನೀಡಲಾಯಿತು. ಅಭಿವೃದ್ಧಿಪಡಿಸಿದ ಸದರಿ ಸೌರ ಶಕ್ತಿ ಉದ್ಯಾನವು ಪ್ರದರ್ಶನದ ಜೊತೆಗೆ ಸಂಸ್ಥೆಗೆ ಉಪಯೋಗವಾಗುವಂತಿರಬೇಕು.

(ಕ್ರಮ : ಡೀನ್(ಕೃಷಿ ತಾಂತ್ರಿಕ)/ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 5 | ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು |
|---|---|

ಠರಾವು:

ವಿಸ್ತೃತ ಚರ್ಚೆಯ ನಂತರ, ಸಿ.ಎ.ಎಸ್. 2006 ರ ಅಡಿಯಲ್ಲಿ ಅರ್ಹರಾದ ಎಲ್ಲಾ ಅಭ್ಯರ್ಥಿಗಳಿಗೆ ಪದೋನ್ನತಿ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 6 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶಿಕ್ಷಕರ ನೇಮಕಾತಿಗಾಗಿ ಅನುಮೋದನೆ ಕುರಿತು |
|---|---|

ಠರಾವು:

ದೀರ್ಘ ಚರ್ಚೆಯ ನಂತರ, ಕೃವಿವಿ., ರಾಯಚೂರಿನಲ್ಲಿ ಶಿಕ್ಷಕರುಗಳ ಭರ್ತಿಗೆ ಸಂಬಂಧಿಸಿದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ, ಬೆಂಗಳೂರು ಇವರ ಅಭಿಪ್ರಾಯವನ್ನು ಮತ್ತೊಮ್ಮೆ ಪಡೆಯಲು ನಿರ್ಧರಿಸಲಾಯಿತು. ಮುಂದುವರೆದು, ಕಾಲಾನುಕ್ರಮವಾಗಿ ನಡೆದ ಘಟನೆಯನ್ನು ವಿವರಗಳನ್ನು ತಿಳಿಯಪಡಿಸಿ, ಸ್ಪಷ್ಟೀಕರಣಗಳನ್ನು ಪಡೆದು ಈ ಕುರಿತು ಅನುಮೋದನೆಗಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ವಿಶೇಷ ಸಭೆಯನ್ನು ಕರೆಯಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಇವರು ಸಲಹೆ ನೀಡಿದರು.

(ಕ್ರಮ : ಕುಲಸಚಿವರು)

| ಹೆಚ್ಚುವರಿ ಅನುಕ್ರಮ ಸಂ: 1 | ದಿವಂಗತ ಡಾ. ಎಲ್.ಬಿ. ಹೂಗಾರ್, ಮಾಜಿ ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ರಾಯಚೂರು ಇವರ ಹೆಸರಿನಲ್ಲಿ ಬಂಗಾರದ ಪದಕವನ್ನು ಸ್ಥಾಪಿಸುವ ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ದಿವಂಗತ ಡಾ. ಎಲ್.ಬಿ. ಹೂಗಾರ್, ಮಾಜಿ ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ರಾಯಚೂರು ಇವರ ಹೆಸರಿನಲ್ಲಿ ಬಂಗಾರದ ಪದಕವನ್ನು ನಾಲ್ಕನೇ ಘಟಿಕೋತ್ಸವದಿಂದಲೇ ಪ್ರಾರಂಭವಾಗುವಂತೆ ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಹೆಚ್ಚುವರಿ ಅನುಕ್ರಮ ಸಂ: 2 | ರಾಯಚೂರು ಮತ್ತು ಗುಲಬರ್ಗಾ ಆವರಣಗಳಲ್ಲಿ ಪ್ರತ್ಯೇಕವಾಗಿ ಕಟ್ಟಡಗಳನ್ನು ಕಟ್ಟಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ರಾಯಚೂರು ಮತ್ತು ಗುಲಬರ್ಗಾಕ್ಕೆ ಕ್ರಮವಾಗಿ ಗೇಣಿ ಕರಾರಿನ ಮೇರೆಗೆ ನೀಡುವ ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ರಾಯಚೂರು ಮತ್ತು ಗುಲಬರ್ಗಾ ಆವರಣಗಳಲ್ಲಿ ಬ್ಯಾಂಕ್ ಕಟ್ಟಡಗಳನ್ನು ಕಟ್ಟಿಸುವ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಆದಗ್ಯೂ, ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಸದರಿ ಕಟ್ಟಡಗಳನ್ನು ಕಟ್ಟಿಸಲು ತಗಲುವ ವೆಚ್ಚದ ಶೇಕಡ 50 ರಷ್ಟು ಹಣವನ್ನು ಹೂಡಿಕೆ ಮಾಡುವ ಕುರಿತು ಬ್ಯಾಂಕ್ ಅಧಿಕಾರಿಗಳ ಜೊತೆಗೆ ವಿಚಾರಿಸಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು.

(ಕ್ರಮ : ಕುಲಸಚಿವರು ಕಾರ್ಯನಿರ್ವಾಹಕ ಅಭಿಯಂತರರು)

ಶ್ರೀಮತಿ ನಫೀಸ್ ಫಾತೀಮಾ, ಮಾನ್ಯ ಸದಸ್ಯರು, ವ್ಯವಸ್ಥಾಪನಾ ಮಂಡಳಿ ಇವರನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಹಣಕಾಸು ಸಮಿತಿಗೆ ಸದಸ್ಯರಾಗಿರುವರೆಂದು ಸಹ ನಿರ್ಧರಿಸಲಾಯಿತು ಮತ್ತು ಇದಕ್ಕೆ ಸಂಬಂಧಿಸಿದ ಆದೇಶವನ್ನು ಆದಷ್ಟು ಬೇಗನೆ ಹೊರಡಿಸಲಾಗುವುದು.

| ಸಹಿ /– 1–1–2014 | ಸಹಿ /– 1–1–2014 |
|---|---|
| **(ಬಿ.ವಿ. ಪಾಟೀಲ)** | **(ಡಿ.ಪಿ. ಬಿರಾದಾರ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಪಿ. ಬಿರಾದಾರ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.